**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಸನಗೌಡ ಬಾದರ್ಲಿ ರವರು ಗಮನ ಸೆಳೆದಿರುವ ಸೂಚನೆಗೆ ಸರ್ಕಾರದ ಹೇಳಿಕೆ:-**

**ಸೂಚನೆ:-**

ಜೋಳದ ಬೆಳೆಯನ್ನೇ ಬೆಳೆಯದೆ ಇತರೆ ಬೆಳೆಗಳನ್ನು ಬೆಳೆದಿರುವ ಹಾಗೂ ಯಾವುದೇ ಬೆಳೆಯನ್ನು ಬೆಳೆಯದಿರುವ ಸಿಂಧನೂರು ತಾಲ್ಲೂಕಿನ ಅಕ್ಕಪಕ್ಕದ ತಾಲ್ಲೂಕಿನ ಕೆಲವು ರೈತರುಗಳು ಬೆಳೆ ಸಮೀಕ್ಷೆ ಅಪ್ಲಿಕೇಶನ್‌ನಲ್ಲಿ ತಾವು ಜೋಳ ಬೆಳೆದಿರುವುದಾಗಿ ಮಾಹಿತಿಯನ್ನು ಅಪ್ಲೋಡ್ ಮಾಡಿಸಿದ್ದು, ಸಿಂಧನೂರು ತಾಲ್ಲೂಕಿನ ವಿವಿಧೆಡೆ ಸರ್ಕಾರದಿಂದ ನೇರವಾಗಿ ರೈತರು ಬೆಳೆದ ಜೋಳವನ್ನು ಖರೀದಿಸಲು ತೆರೆಯಲಾದ ಖರೀದಿ ಕೇಂದ್ರಗಳಲ್ಲಿ ಜೋಳ ಮಾರಾಟಕ್ಕೆ ಹೆಸರು ನೋಂದಣಿ ಮಾಡಿಸಿಕೊಂಡಿರುತ್ತಾರೆ. ಇದರಿಂದಾಗಿ ನೈಜ ಜೋಳ ಬೆಳೆಯುವ ರೈತರು ಸಂಕಷ್ಟಕ್ಕೀಡಾಗಿರುವ ಕುರಿತು ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುವುದು.

**ಉತ್ತರ:-**

2025-26 ನೇ ಸಾಲಿನಲ್ಲಿ ರಾಜ್ಯ ಸರ್ಕಾರದಿಂದ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತವನ್ನು ಭತ್ತ, ಬಿಳಿಜೋಳ, ರಾಗಿ ಮತ್ತು ಕಿರು ಸಿರಿಧಾನ್ಯಗಳನ್ನು ರಾಜ್ಯ ರೈತರಿಂದ ಖರೀದಿಸಲು ಖರೀದಿ ಏಜೆನ್ಸಿಯಾಗಿ ನೇಮಿಸಲಾಗಿದೆ. ಸದರಿ ಪ್ರಕ್ರಿಯೆಗೆ ಕೃಷಿ ಇಲಾಖೆಯಿಂದ ನೀಡಿರುವ FRUITS ID ಯನ್ನು ರೈತರಿಂದ ಪಡೆದು ಸದರಿ ತಂತ್ರಾಂಶದಲ್ಲಿ ಆಹಾರಧಾನ್ಯಗಳನ್ನು ನೀಡಲು ರೈತರು ಅರ್ಹರು ಎಂದು ಬಂದ ನಂತರವಷ್ಟೇ ಅಂತಹ ರೈತರನ್ನು ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ನೋಂದಣಿ ಮಾಡಿಕೊಳ್ಳಲಾಗುತ್ತಿದೆ.

ಜಿಲ್ಲಾಧಿಕಾರಿಗಳು, ರಾಯಚೂರು ಇವರ ವರದಿಯನುಸಾರ 2025-26 ನೇ ಸಾಲಿನ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಜೋಳ ಖರೀದಿ ಮಾಡಲು ಈಗಾಗಲೇ ನೋಂದಾಯಿಸಿದ ರೈತರ ಪಟ್ಟಿಯನ್ವಯ ಜಿಲ್ಲೆಯ ತಾಲ್ಲೂಕುಗಳಲ್ಲಿನ ರೈತರು ತಮ್ಮ ತಾಲ್ಲೂಕು ಬಿಟ್ಟು ಬೇರೆ ತಾಲ್ಲೂಕುಗಳಲ್ಲಿರುವ ಖರೀದಿ ಕೇಂದ್ರಗಳಲ್ಲಿ ನೋಂದಾಯಿಸಿರುವುದು ಕಂಡುಬಂದಿರುವ ಬಗ್ಗೆ ಪರಿಶೀಲಿಸಲು ದಿನಾಂಕ: 02.03.2026 ರಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಸದರಿ ಸಂಶಯಾತ್ಮಕವಾಗಿ ನೋಂದಣಿಯಾಗಿರುವ 7,536 ಸರ್ವೆ ನಂ. ಗಳನ್ನು ತಪಾಸಣೆ ನಡೆಸಿ ವರದಿ ನೀಡಲು ಸೂಚಿಸಿರುವಂತೆ ಜಂಟಿ ಕೃಷಿ ನಿರ್ದೇಶಕರು ವರದಿ ನೀಡಿದ್ದು, ಮುಂಗಾರು ಮತ್ತು ಹಿಂಗಾರು ಋತುವಿನಲ್ಲಿ ತಪ್ಪಾಗಿ ಜೋಳ ಎಂದು ಇಂಧೀಕರಿಸಿದ ಒಟ್ಟು 2,196 ಸರ್ವೆ ನಂ. ಗಳ FID ಗಳನ್ನು ಬ್ಲಾಕ್ ಮಾಡಲು ಅಲ್ಲದೇ ತಹಶೀಲ್ದಾರರ ವರದಿಯನ್ವಯ 21 FID ಗಳನ್ನು ಬ್ಲಾಕ್ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಅಲ್ಲದೇ ದಿನಾಂಕ: 07.03.2026 ರಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಮತ್ತೊಮ್ಮೆ ಸಭೆ ಸೇರಿ ಪ್ರಸಕ್ತ ಸಾಲಿನ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಜೋಳ ಖರೀದಿ ಮಾಡುವ ಬಗ್ಗೆ ಈಗಾಗಲೇ ಬೇರೆ ತಾಲ್ಲೂಕುಗಳಲ್ಲಿ ನೋಂದಾಯಿಸಿದವರ ಸರ್ವೆ ನಂ. ಗಳನ್ನು ಪರಿಶೀಲಿಸಲಾಗಿದ್ದು, ತಪ್ಪಾಗಿ ಇಂಧಿಕರಿಸಿರುವುದು ಕಂಡುಬಂದಿರುವ ಮೇರೆಗೆ ಪ್ರಸ್ತುತ ಅವುಗಳನ್ನು ಹೊರತುಪಡಿಸಿ ಸಿಂಧನೂರು ತಾಲ್ಲೂಕಿನಲ್ಲಿಯೇ ಬೆಳೆ ಬೆಳೆದು ಅದೇ ತಾಲ್ಲೂಕಿನ ಖರೀದಿ ಕೇಂದ್ರಗಳಲ್ಲಿ ನೋಂದಣಿಯಾಗಿರುವ ಒಟ್ಟು 21,234 ಸರ್ವೆ ನಂ. ಗಳನ್ನು ಸಹ ಬೆಳೆ ದರ್ಶಕ ಆಪ್‌ನಲ್ಲಿ ಪರಿಶೀಲಿಸಿ ವರದಿ ಸಲ್ಲಿಸುವಂತೆ ತಿಳಿಸಿ ಜಂಟಿ ನಿರ್ದೇಶಕರು, ಕೃಷಿ ಇಲಾಖೆ ಹಾಗೂ ಜಿಲ್ಲೆಯ ಎಲ್ಲಾ ತಾಲ್ಲೂಕಿನ ತಹಶೀಲ್ದಾರರಿಗೆ ಸೂಚಿಸಲಾಗಿರುತ್ತದೆ. ಕೃಷಿ ಇಲಾಖೆ ಹಾಗೂ ಕಂದಾಯ ಇಲಾಖೆಯ ಸಿಬ್ಬಂದಿಗಳನ್ನು ಒಳಗೊಂಡ ಜಂಟಿ ತಂಡಗಳಿಂದ ಪರಿಶೀಲನಾ ಕಾರ್ಯ ಪ್ರಗತಿಯಲ್ಲಿದ್ದು, ಪರಿಶೀಲನೆ ಕಾರ್ಯ ಮುಕ್ತಾಯವಾದ ನಂತರ ಅನರ್ಹ FID ಗಳನ್ನು ಗುರುತಿಸಿ ಅವುಗಳನ್ನು ಬ್ಲಾಕ್ ಮಾಡಲು ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ, ಬೆಂಗಳೂರು ಇವರಿಗೆ ತಿಳಿಸಲಾಗುವುದು.

ಮುಂದುವರೆದು, ಹೀಗಾಗಲೇ ಸಿಂಧನೂರು ತಾಲ್ಲೂಕಿನ ಮಲ್ಲಾಪೂರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ (PACS) ನಲ್ಲಿ ನೋಂದಣಿಯಾಗಿಸಿದ ಪಟ್ಟಿಯನ್ನು ಕಂದಾಯ ಇಲಾಖೆ ಹಾಗೂ ಕೃಷಿ ಇಲಾಖೆ ಜಂಟಿಯಾಗಿ ಪರಿಶೀಲಿಸಿದಾಗ ಒಟ್ಟು 269 ಸರ್ವೆ ನಂಬರ್ ಗಳು ಸಂಶಯಾಸ್ಪದವಾಗಿದ್ದು, ಅವುಗಳನ್ನು ಕ್ಷೇತ್ರ ಪರಿಶೀಲನೆ ಮಾಡಿ ವರದಿ ಸಲ್ಲಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗುತ್ತದೆ ಹಾಗೂ ಬೆಳೆ ದರ್ಶಕ ಆ್ಯಪ್ ನಲ್ಲಿ ಪರಿಶೀಲಿಸಲಾಗಿ ಜೋಳ ಬೆಳೆ ಬೆಳೆಯದೆ ಇತರ ಬೆಳೆಗಳನ್ನು ಬೆಳೆದಿರುವ ಒಟ್ಟು 267 ಸರ್ವೆ ನಂಬರ್ ಗಳು ಕಂಡು ಬಂದಿದ್ದು, ಸದರಿ ಸರ್ವೆ ನಂಬರಗಳನ್ನು ಬ್ಲಾಕ್ ಮಾಡಲು ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ, ಬೆಂಗಳೂರು ಇವರಿಗೆ ತಿಳಿಸಲಾಗುವುದು

ಸಂಖ್ಯೆ:ಆರ್‌ಡಿ 112 ಎಂಎಲ್‌ಎಂ 2026

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಸನಗೌಡ ಬಾದರ್ಲಿ ಇವರು ನಿಯಮ-72 ಗಮನ ಸೆಳೆಯುವ ಸೂಚನೆ ಸಂಖ್ಯೆ 170 ಗೆ ಸಂಬಂಧಿಸಿದಂತೆ ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖಾ ಸಚಿವರ ಉತ್ತರ.

*****

ಸೂಚನೆ:

ಜೋಳದ ಬೆಳೆಯನ್ನೇ ಬೆಳೆಯದೆ ಇತರೆ ಬೆಳೆಗಳನ್ನು ಬೆಳೆದಿರುವ ಹಾಗೂ ಯಾವುದೇ ಬೆಳೆಯನ್ನು ಬೆಳೆಯದಿರುವ ಸಿಂಧನೂರು ತಾಲ್ಲೂಕಿನ ಅಕ್ಕಪಕ್ಕದ ತಾಲ್ಲೂಕಿನ ಕೆಲವು ರೈತರುಗಳು ಬೆಳೆ ಸಮೀಕ್ಷೆ ಅಪ್ಲಿಕೇಶನ್ ನಲ್ಲಿ ತಾವು ಜೋಳ ಬೆಳೆದಿರುವುದಾಗಿ ಮಾಹಿತಿಯನ್ನು ಅಪ್ಲೋಡ್ ಮಾಡಿಸಿದ್ದು, ಸಿಂಧನೂರು ತಾಲ್ಲೂಕಿನ ವಿವಿಧೆಡೆ ಸರ್ಕಾರದಿಂದ ನೇರವಾಗಿ ರೈತರು ಬೆಳೆದ ಜೋಳವನ್ನು ಖರೀದಿಸಲು ತೆರೆಯಲಾದ ಖರೀದಿ ಕೇಂದ್ರಗಳಲ್ಲಿ ಜೋಳ ಮಾರಾಟಕ್ಕೆ ಹೆಸರು ನೋಂದಣಿ ಮಾಡಿಸಿಕೊಂಡಿರುತ್ತಾರೆ. ಇದರಿಂದಾಗಿ ನೈಜ ಜೋಳ ಬೆಳೆಯುವ ರೈತರು ಸಂಕಷ್ಟಕ್ಕೀಡಾಗಿರುವ ಕುರಿತು ಮಾನ್ಯ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖಾ ಸಚಿವರ ಗಮನಸೆಳೆಯ ಬಯಸುತ್ತೇನೆ.

ಉತ್ತರ:

2025-26 ನೇ ಸಾಲಿನಲ್ಲಿ ರಾಜ್ಯ ಸರ್ಕಾರದಿಂದ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತವನ್ನು ಭತ್ತ, ಬಿಳಿಜೋಳ, ರಾಗಿ ಮತ್ತು ಕಿರು ಸಿರಿಧಾನ್ಯಗಳನ್ನು ರಾಜ್ಯ ರೈತರಿಂದ ಖರೀದಿಸಲು ಖರೀದಿ ಏಜೆನ್ಸಿಯಾಗಿ ನೇಮಿಸಲಾಗಿದೆ. ಸದರಿ ಪ್ರಕ್ರಿಯೆಗೆ ಕೃಷಿ ಇಲಾಖೆಯಿಂದ ನೀಡಿರುವ FRUITS ID ಯನ್ನು ರೈತರಿಂದ ಪಡೆದು ಸದರಿ ತಂತ್ರಾಂಶದಲ್ಲಿ ಆಹಾರಧಾನ್ಯಗಳನ್ನು ನೀಡಲು ರೈತರು ಅರ್ಹರು ಎಂದು ಬಂದನಂತರವಷ್ಟೇ ಅಂತಹ ರೈತರನ್ನು ಕನಿಷ್ಠ ಬೆಂಬಲ ಬೆಲೆಯೋಜನೆಯಡಿ ನೋಂದಣಿ ಮಾಡಿಕೊಳ್ಳಲಾಗುತ್ತಿದೆ. ಆದರೆ ರೈತರ ಜಮೀನು ಮತ್ತು ಬೆಳೆ ವಿವರಗಳನ್ನು ಮಾರ್ಪಾಡುಗಳನ್ನು ಮಾಡಲು ಖರೀದಿ ಏಜೆನ್ಸಿಗಾಗಲೀ ಅಥವಾ ಖರೀದಿ ಕೇಂದ್ರಕ್ಕಾಗಲೀ ಯಾವುದೇ ಅಧಿಕಾರ ಇರುವುದಿಲ್ಲ.

ರಾಯಚೂರು ಜಿಲ್ಲೆಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳು, ರಾಯಚೂರು ರವರು ದಿನಾಂಕ: 05-03-2026 ರಂದು ಖರೀದಿ ಏಜೆನ್ಸಿಯಾದ KFCSC ಯ ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ ಇವರಿಗೆ ಸಲ್ಲಿಸಿರುವ ವರದಿಯಲ್ಲಿ ಸಿಂಧನೂರು ತಾಲ್ಲೂಕಿನ ಮಾವಿನಮಡು ಗ್ರಾಮದ ಕೆಲವೊಂದು ರೈತರು 2025-26 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ತಮ್ಮ ಜಮೀನಿನಲ್ಲಿ ಬೇರೆ ಬೇರೆ ಬೆಳ ಬೆಳೆದಿದ್ದು, ಬೆಳ ಸರ್ವೆಗೆ ನಿಯೋಜನೆಗೊಂಡ ಖಾಸಗಿ ಸಮೀಕ್ಷೆದಾರರು ಜೋಳದ ಬೆಳೆ ಬೆಳೆದಿರುವುದಾಗಿ ನಮೂದಿಸಿದ್ದು, ಆದರೆ ಪ್ರಸ್ತುತ ಸ್ಥಾನಿಕವಾಗಿ ನೋಡಲಾಗಿ ಸದರಿ ಜಮೀನುಗಳಲ್ಲಿ ಜೋಳದ ಬೆಳೆದಿರುವುದಿಲ್ಲ ಎಂದು ವರದಿ ಸಲ್ಲಿಸಿರುವ ಹಿನ್ನೆಲೆಯಲ್ಲಿ ಸದರಿ 21 ರೈತರ ಎಫ್‌ಐಡಿ, ಹೆಸರು ಮತ್ತು ಸರ್ವೆ ನಂ. ಮಾಹಿತಿಯನ್ನು ಪಟ್ಟಿ ಮಾಡಿ ಸಲ್ಲಿಸಿದ್ದು, ಕಾರಣ 2025-26 ನೇ ಸಾಲಿನ ಮುಂಗಾರು ಋತುವಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಸದರಿ ಎಫ್‌ಐಡಿ ಗಳ ನೋಂದಣಿ ಬ್ಲಾಕ್ ಮಾಡಿ ಜೋಳ

ಖರೀದಿ ಪ್ರಕ್ರಿಯೆಯನ್ನು ಸ್ಥಗಿತ ಗೊಳಿಸಲು ಹಾಗೂ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಸಂಶಾಯಸ್ಪದವಾಗಿ ನೋಂದಣಿಯಾದ 2196 ಸರ್ವೆ ನಂ. ಗಳ ಪಟ್ಟಿಯನ್ನು ನೀಡಿ ಸದರಿ ಎಫ್‌ಐಡಿ ಗಳನ್ನು ಖರೀದಿ ತಂತ್ರಾಂಶದಲ್ಲಿ ತಾತ್ಕಾಲಿಕವಾಗಿ ಬ್ಲಾಕ್ ಮಾಡುವಂತೆ ಕೋರಿರುತ್ತಾರೆ.

ಜಿಲ್ಲಾಧಿಕಾರಿಗಳು, ರಾಯಚೂರು ರವರು ಕೋರಿರುವಂತೆ 1660 ರೈತರಿಗೆ ಸೇರಿದ 2196 ಸರ್ವೆ ನಂ.ಗಳನ್ನು ಹಾಗೂ ಮಾವಿನಮಡು ಗ್ರಾಮದಲ್ಲಿ ಗುರುತಿಸಿದ 21 FRUITS ID ಗಳನ್ನು FIST ತಂತ್ರಾಂಶದಲ್ಲಿ ಖರೀದಿಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲು ಅಗತ್ಯ ಕ್ರಮವಹಿಸುವಂತೆ National Informatics Centre (NIC) ಕೋರಲಾಗಿದೆ.

ಈ ಬಗ್ಗೆ ಜಿಲ್ಲಾಡಳಿತ ಹಂತದಲ್ಲಿ ಸಂಪೂರ್ಣ ತನಿಖೆಯಾಗಿ ಸೂಕ್ತ ಶಿಫಾರಸ್ಸು ಮಾಡುವವರೆಗೂ ಸದರಿ ರೈತರಿಂದ ಖರೀದಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗುವುದಿಲ್ಲ. ಒಂದು ವೇಳೆ ಮುಂದಿನ ಈ ರೀತಿಯ ಪ್ರಕರಣಗಳು ಕಂಡು ಬಂದು ಜಿಲ್ಲಾಡಳಿತದಿಂದ ಶಿಫಾರಸು ಮಾಡಿದಲ್ಲಿ ಅಂತಹ ಪ್ರಕರಣಗಳನ್ನು ಸಹ ತಡೆಹಿಡಿಯಲು ಸೂಕ್ತ ಕ್ರಮವಹಿಸಲಾಗುವುದು.

ಇ-ಆನಾಸ 43 ಆರ್‌ಪಿಆರ್ 2026

(ಕೆ.ಹೆಚ್. ಮುನಿಯಪ್ಪ)
ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು